# ಬರಗಾಲದ ದಾಗಡಿ ಬಳ್ಳಿ



ಚಿತ್ರ ಬರಹ:
**ಚೆನ್ನರಾಜ್ ಎಲ್.ಸಿ.**

ಬೆಂಗಳೂರು ಅಂಚಿನ ತೋಟದಲ್ಲಿ ಅಡ್ಡಾಡಿಕೊಂಡು ಅಜ್ಜಿ, ಅಮ್ಮನ ಜೊತೆ ಬೆರಕೆ ಸೊಪ್ಪು ಸಂಗ್ರಹಿಸುವುದು ನನ್ನ ತಂಗಿ ಸುಮಾಳ ಅಭ್ಯಾಸ. ಆಕೆ ಮನೆಗೆ ಬಂದಾಗಲೆಲ್ಲಾ, 'ತೋಟಕ್ಕೆ ಹೋದರೆ ದಾಗಡಿ ಸೊಪ್ಪು ತೆಗೆದುಕೊಂಡು ಬಾ' ಎನ್ನುತ್ತಿದ್ದಳು. ಹೊಲ, ತೋಟಗಳ ಸಂಸ್ಕೃತಿಯಲ್ಲಿ ಬದುಕುವ ಮಹಿಳೆಯರಿಗೆ ಬೆರಕೆ ಸೊಪ್ಪಿನ ಜ್ಞಾನ ಸಹಜವಾಗಿ ರೂಪುಗೊಂಡಿರುತ್ತದೆ. ವರ್ಷದ ವಿವಿಧ ಋತುಮಾನಗಳಲ್ಲಿ ಸಿಗುವ ಸೊಪ್ಪುಗಳು, ಯಾವ ಸೊಪ್ಪಿನ ಜೊತೆ ಯಾವ ಸೊಪ್ಪು ಹೊಂದಿಕೊಳ್ಳುತ್ತದೆ, ಸಾರು, ಪಲ್ಯ ಮಾಡಲು ಯಾವ ಸೊಪ್ಪುಗಳು ಸೂಕ್ತ ಎಂಬ ಪರಂಪರೆಯ ಜ್ಞಾನ ಹೆಣ್ಣುಮಕ್ಕಳಿಗೆ ಕರಗತವಾಗಿರುತ್ತದೆ.

ಸಹಜವಾಗಿ ಬೆಳೆಯುವ ಔಷದಿ ಸಸ್ಯಗಳಲ್ಲಿ ದಾಗಡಿ ಬಳ್ಳಿಯೂ ಒಂದು. ಮಳೆಯ ಕೊರತೆಗೆ ಹೊಂದಿಕೊಂಡು ಬೆಳೆಯುವ ಪ್ರಚಂಡ ಬರ ನಿರೋಧಕ ಶಕ್ತಿ ಇದರದ್ದು. ಜೊತೆಗೆ ಹತ್ತಾರು ಔಷಧೀಯ ಗುಣಗಳನ್ನು ಹೊಂದಿರುವ ಮತ್ತು ಆಹಾರವಾಗಿ ಬಳಸುವ ಬೆರಕೆ ಸೊಪ್ಪುಗಳಲ್ಲಿ ಇದು ಬಹು ಮುಖ್ಯವಾದದ್ದು. ಮೆನಿಸ್ಪರ್ಮೇಸಿ ಸಸ್ಯ ಕುಟುಂಬಕ್ಕೆ ಸೇರಿದ ದಾಗಡಿ ಬಳ್ಳಿಯ ವೈಜ್ಞಾನಿಕ ಹೆಸರು ಕಾಕ್ಯುಲಸ್ ಹಿರ್ಸುಟಸ್. ಸಂಸ್ಕೃತದಲ್ಲಿ ಪಾತಾಳಗರುಡಿ, ಹಿಂದಿಯಲ್ಲಿ ಜಮ್ಟಿ ಕಿ ಜೆಲ್, ತಮಿಳಿನಲ್ಲಿ ಕಾಟ್ಟುಕ್ಕೊಡಿ, ತೆಲುಗಿನಲ್ಲಿ ದುಸಾರ್ಟಿ ಎನ್ನುತ್ತಾರೆ. ಇಂಗ್ಲಿಷ್‌ನಲ್ಲಿ ಫಿಷಾಬೆರ್ರಿ ಮತ್ತು ಇಂಕ್ ಬೆರ್ರಿ ಎಂಬ ಹೆಸರುಗಳಿವೆ.

ದಾಗಡಿ ಬಳ್ಳಿಯು ಕಲ್ಲುಗುಡ್ಡಗಳಿಂದ ಕೂಡಿದ ಕುರುಚಲು ಸಸ್ಯಗಳು ಬೆಳಯುವ ಪ್ರದೇಶಗಳಲ್ಲಿ ಸಾಮಾನ್ಯವಾಗಿ ಕಂಡು ಬರುತ್ತದೆ. ಅಕ್ಕ ಪಕ್ಕದ ಗಿಡಗಳ ಮೇಲೆ ಹಬ್ಬಿಕೊಂಡು ಬೆಳೆಯುತ್ತದೆ. ವರ್ಷದ ಎಲ್ಲಾ ಕಾಲದಲ್ಲೂ ಹಚ್ಚ ಹಸಿರಿನಿಂದ ಕೂಡಿದ್ದು ಬಳ್ಳಿಯ ಎರಡು ಪಕ್ಕ ಪರ್ಯಾಯವಾಗಿ ಜೋಡಣೆಯಾಗಿರುವ ಎಲೆಗಳ ಕಂಕುಳಲ್ಲಿ ಹೂಗಳು ಮೂಡಿ, ದಟ್ಟನೆಯ ನೀಲಿ ಬಣ್ಣದ ಹಣ್ಣುಗಳಾಗುತ್ತವೆ. ಕುರುಚಲು ಕಾಡಿನ ಪರಿಸರ ವ್ಯವಸ್ಥೆಯ ಮರ, ಗಿಡ, ಬಳ್ಳಿಗಳ ಜೊತೆ ಸಹಜವಾಗಿ ಜೋಡಣೆಯಾಗಿರುವ ದಾಗಡಿ ಬಳ್ಳಿಯ ಹಣ್ಣುಗಳನ್ನು ಪಿಕಳಾರ ಪಕ್ಷಿಗಳು ತಿಂದು, ಹಿಕ್ಕೆಯ ಮೂಲಕ ಬೀಜ ಪ್ರಸಾರ ಮಾಡುತ್ತವೆ.

ಈ ವರ್ಷ ನಿರಂತರವಾಗಿ ಮಳೆ ಬಾರದೆ ಎಲ್ಲೆಡೆ ಮಣ್ಣಿನಲ್ಲಿ ತೇವಾಂಶದ ಕೊರತೆ ತೀವ್ರವಾಗಿದೆ. ಹಾಗಿದ್ದೂ ದಾಗಡಿ ಬಳ್ಳಿಗಳು ಅಕ್ಕ ಪಕ್ಕದ ಗಿಡಗಳ ಮೇಲೆ ಹಬ್ಬಿ ಹಸಿರಿನಿಂದ ನಳನಳಿಸುತ್ತಿವೆ.